# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಯಲಹಂಕ ವಲಯ

**ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ, ಯಲಹಂಕ ಉಪನಗರ ಉಪ ವಿಭಾಗ**

**ವಾರ್ಡ್ ನಂ. 04ರ (ಯಲಹಂಕ ಉಪನಗರ) ವಾರ್ಡ್ ಕಮಿಟಿ ಸಭೆಯ ನಡವಳಿಗಳು.**

ದಿನಾಂಕ: 05-12-2020 ರಂದು ಮದ್ಯಾಹ್ನ 1.00 ಗಂಟೆಗೆ ವಾರ್ಡ್ ನಂ-04 ಯಲಹಂಕ ಉಪನಗರ ವಾರ್ಡ್ ಸಮಿತಿಯ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ಯಲಹಂಕ ಉಪನಗರ ಉಪ ವಿಭಾಗದ ಕಛೇರಿಯಲ್ಲಿ ನೆಡೆದ ವಾರ್ಡ್ ಕಮಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ಮನೋಜ್ ಜೈನ್, ಐ.ಎ.ಎಸ್ | ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಬಿ.ಬಿ.ಎಂ.ಪಿ ನೋಡಲ್ ಅಧಿಕಾರಿಗಳು (ವಾರ್ಡ್ ನಂ-04) |
| 02 | ಶ್ರೀ.ರಂಗನಾಥ್ | ಮುಖ್ಯ ಅಭಿಯಂತರರು ಬಿ.ಬಿ.ಎಂಪಿ ಯಲಹಂಕ ವಲಯ |
| 03 | ಶ್ರೀ.ರಾಜೇಂದ್ರ ನಾಯಕ್ | ಕಾ.ಅ ಬಿ.ಬಿ.ಎಂ.ಪಿ (ವಿದ್ಯುತ್) |
| 04 | ಶ್ರೀ.ದೇವೆಂದ್ರ ನಾಯಕ್ | ಕಾ.ಅ ಬಿ.ಬಿ.ಎಂ.ಪಿ (ಯೋಜನೆ) ಯಲಹಂಕ ವಲಯ ಗೈರು ಹಾಜರು |
| 05 | ಶ್ರೀ.ಹೆಚ್.ಪಿ.ಸಚಿನ್ | ಸ.ಕಾ.ಅ, ಬಿ.ಬಿ.ಎಂ.ಪಿ (ಯ.ಉ.ಉ.ವಿ) (ಗೈರು ಹಾಜರು) |
| 06 | ಶ್ರೀ.ಹೆಚ್.ಕೆ.ದೇವರಾಜ್ | ಸ.ಕಾ.ಅ (ರೋಡ್ ಇನ್‌ಪ್ರಸ್ಟಚರ್ಸ್ ಬಿ.ಬಿ.ಎಂ.ಪಿ) |
| 07 | ಶ್ರೀ.ಶ್ರೀನಿವಾಸ ಟಿ | ಸ.ಕಾ.ಅ, ಬಿ.ಬಿ.ಎಂ.ಪಿ (ರಾಜಕಾಲುವೆ) |
| | ಶ್ರೀ.ಶ್ರೀನಿವಾಸ ಜೆ.ಎನ್ | ಸ.ಅ ಬಿ.ಬಿ.ಎಂ.ಪಿ (ರಾಜಕಾಲುವೆ) |
| 08 | ಶ್ರೀ.ಪ್ರಕಾಶ್ ಕೆ.ವಿ. | ಸ.ಕಾ.ಅ ಬಿ.ಬಿ.ಎಂ.ಪಿ. (ಕೆರೆಗಳು) ಗೈರು ಹಾಜರು |
| 09 | ಶ್ರೀ.ಪ್ರಭುದ್ದ ಕಾಂಬ್ಲೆ | ಸ.ಕಾ.ಅ ಬಿ.ಬಿ.ಎಂ.ಪಿ (ಎಸ್.ಡಬ್ಲ್ಯೂ.ಎಂ) ಗೈರು ಹಾಜರು |
| 10 | ಶ್ರೀಮತಿ. ಅನುಸೂಯ ಡಿ | ಸ.ಕಾ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಒಳಚರಂಡಿ ವಿಭಾಗ ಗೈರು ಹಾಜರಿ |
| 11 | ಶ್ರೀ.ಪಿ.ಎಂ.ಮಲ್ಯಾದ್ರಿ | ತೋಟಗಾರಿಕೆ ಪರಿವೀಕ್ಷಕರು (ತೋಟಗಾರಿಕೆ) |
| 12 | ಶ್ರೀ.ಒ.ಜಿ.ಯೋಗೇಶ್ | ಸ.ಅ ಬಿ.ಬಿ.ಎಂ.ಪಿ (ನಗರ ಯೋಜನೆ) ಗೈರು ಹಾಜರಿ |
| 13 | ಶ್ರೀ.ರಾಮಸಂಜೀವಯ್ಯ | ಸ.ಅ ಬಿ.ಬಿ.ಎಂ.ಪಿ ವಾರ್ಡ್ ನಂ-04 ಹಾಗೂ ಕಾರ್ಯದರ್ಶಿಗಳು. |
| 14 | ಶ್ರೀ.ವಿನಾಯಕ ಕೆ.ಎಂ | ಸ.ಅ (ಬಿ.ಡಬ್ಲ್ಯೂ.ಎಸ್.ಎಸ್.ಬಿ) |

| | | |
|---|---|---|
| 15 | ಶ್ರೀ.ಆನಂದ್ ಎ | ಸ.ಅ (ಬೇಸ್ಕಾಂ) |
| 16 | ಠಾಣಾಧಿಕಾರಿಗಳು ಯಲಹಂಕ ಉಪನಗರ ಪೋಲಿಸ್ ಠಾಣೆ | ಗೈರು ಹಾಜರು |
| 17 | ಶ್ರೀ.ಲಿಂಗರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ ವಾರ್ಡ್ -4 |
| 18 | ಠಾಣಾಧಿಕಾರಿಗಳು (ಟ್ರಾಫಿಕ್) ಯಲಹಂಕ ಉಪನಗರ ಪೋಲಿಸ್ ಠಾಣೆ | ಗೈರು ಹಾಜರು |
| 19 | ಶ್ರೀಮತಿ. ಎನ್.ನೇತ್ರಾವತಿ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ |
| 20 | ಶ್ರೀಮತಿ. ಅನಿತಾ | ಅಸೆಸರ್, ಬಿ.ಬಿ.ಎಂ.ಪಿ (ವಾರ್ಡ್ 4) |
| 21 | ಶ್ರೀ.ಶೇಖರ್ | ಅರಣ್ಯ ಬಿ.ಬಿ.ಎಂ.ಪಿ ಯಲಹಂಕ ವಲಯ |
| 22 | ಶ್ರೀ.ಎಸ್.ಎಂ.ಪ್ರಸಾದ್ | ಸೆಕ್ಟರ್ ಅಪೀಸರ್ ಕೋವಿಡ್-19 ಗೈರು ಹಾಜರು |
| 23 | ಶ್ರೀ.ಲಕ್ಷ್ಮಿನಾರಾಯಣಪ್ಪ | ಜಾನುವಾರು ಅಧಿಕಾರಿ ಬಿ.ಬಿ.ಎಂ.ಪಿ ಯಲಹಂಕ ವಲಯ |
| | **ಬಡಾವಣೆ ಕ್ಷೇಮಾಭಿವೃದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/** | |
| 01 | ಶ್ರೀ.ಪದ್ಮಾ ಪಾಟಿಲ್ | ಆರ್.ಡಬ್ಲ್ಯು.ಎ (ಪೂರ್ವಂಕರ ವಸತಿ ಸಂಕೀರ್ಣ) |
| 02 | ಶ್ರೀಮತಿ. ಗೀತಾ ಪ್ರಸಾದ್ | ಆರ್,ಡಬ್ಲ್ಯು.ಎ |
| 03 | ಡಾ11 ಪದ್ಮಾ ಪ್ರಕಾಶ್ | ಆರ್,ಡಬ್ಲ್ಯು.ಎ |
| 04 | ಶ್ರೀ.ಜಿ.ರವಿ | ಆರ್,ಡಬ್ಲ್ಯು.ಎ ಎ ಸೇಕ್ಟರ್ |
| 05 | ಶ್ರೀ.ಟಿ.ಕೆ.ಪುಟ್ಟಸ್ವಾಮಿ | ಆರ್,ಡಬ್ಲ್ಯು.ಎ ಬಿ. ಸೇಕ್ಟರ್ |
| 06 | ಶ್ರೀ.ವಿಜಯ್ ಕುಮಾರ್ | ಆರ್,ಡಬ್ಲ್ಯು.ಎ ಬಿ. ಸೇಕ್ಟರ್ |
| 07 | ಶ್ರೀ.ಯೋಗೇಶ್ ಪಿ | ಐ.ಟಿ.ಸಿ (ಒಣ ಕಸ ಕೇಂದ್ರ) |
| 08 | ಶ್ರೀ.ಹೆಚ್.ಎಸ್.ಪ್ರಭಾಕರ್ | ವಿದ್ಯುತ್ ದೀಪ ನಿರ್ವಹಣೆ ಗುತ್ತಿಗೆದಾರರು |
| 09 | ಶ್ರೀ.ಎಸ್.ಎಂ. ಪ್ರದೀಪ್ ಕುಮಾರ್ | ವಿದ್ಯುತ್ ದೀಪ ನಿರ್ವಹಣೆ ಗುತ್ತಿಗೆದಾರರು |
| 10 | ಶ್ರೀ.ದೊಡ್ಡಹನುಮಯ್ಯ | ಆರ್.ಡಬ್ಲ್ಯು.ಎ |
| 11 | ಶ್ರೀ.ಕರುಣಾಕರ್ ಶೆಟ್ಟಿ | ಆರ್.ಡಬ್ಲ್ಯು.ಎ |
| 12 | ಶ್ರೀ.ಚಂದ್ರಮೌಳಿ ಶಾಸ್ತ್ರಿ | ಆರ್.ಡಬ್ಲೂ.ಎ |
| 13 | ಶ್ರೀಮತಿ. ಮಮತ | ಆರ್.ಡಬ್ಲ್ಯು.ಎ |
| 14 | ಶ್ರೀ.ಗುರುರಾಜ್ | ಆರ್.ಡಬ್ಲ್ಯು.ಎ |

ಶ್ರೀ. ರಾಮಸಂಜೀವಯ್ಯ ಸಹಾಯಕ ಅಭಿಯಂತರರು ವಾರ್ಡ್ ನಂ-04 ಹಾಗೂ ಕಾರ್ಯದರ್ಶಿಗಳು ವಾರ್ಡ್ ಸಮಿತಿ ರವರು ಸಭೆಗೆ ಹಾಜರಿದ್ದ ನೊಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೊಡೆಲ್ ಅಧಿಕಾರಿರವರನ್ನು ಕೋರಲಾಯಿತು

ಶ್ರೀ. ಮನೋಜ್ ಜೈನ್ ಐ.ಎ.ಎಸ್, ಮಾನ್ಯ ವಿಶೇಷ ಆಯುಕ್ತರು ಬಿ.ಬಿ.ಎಂ.ಪಿ (ಯೋಜನೆ) ಹಾಗೂ ಸಮಿತಿಯ ನೊಡೆಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ಹಿಂದಿನ ಸಭೆಯಲ್ಲಿ ಅಂದರೆ

ದಿನಾಂಕ:21-11-2020 ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-04ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ಶ್ರೀಮತಿ ಪದ್ಮಾಪಾಟೀಲ್, ಆರ್.ಡಬ್ಲ್ಯೂ.ಎ (ಪೂರ್ವಂಕರ ವಸತಿ ಸಂಕೀರ್ಣ) ರವರು ಮಾತನಾಡಿ ಕೊವಿಡ್-19 ಸಂಬಂಧ ಮೆಡಿಕಲ್ ವೇಸ್ಟ್ ಅನ್ನು ಪ್ರತ್ಯೇಕವಾಗಿ ಬೇರ್ಪಡಿಸಿ ನೀಡದೇ ಅವೈಜ್ಞಾನಿಕವಾಗಿ ವಿಲೇವಾರಿ ಮಾಡಿರುವ ಬಗ್ಗೆ ಅಕ್ಷೇಪಣೆ ವ್ಯಕ್ತಪಡಿಸಿದರು. ಹಾಗೂ ಒಣಕಸವನ್ನು ಅನಧೀಕೃತ ವೆಂಡರ್ಸ್‌ಗೆ ಮಾರಾಟ ಮಾಡಿರುವುದಕ್ಕೆ ಸಂಬಂದಿಸಿದಂತೆ ಹಿರಿಯ ಆರೋಗ್ಯ ಪರೀವೀಕ್ಷಕರು ದಿನಾಂಕ: 13-11-2020 ರಂದು ನೋಟಿಸ್ ಜಾರಿ ಮಾಡಿದ್ದು, ಎಸ್.ಡಬ್ಲ್ಯೂ.ಎಂ ಬೈಲಾ ಪ್ರಕಾರ ದಂಡ ವಿಧಿಸಲು ಸಭೆಯಲ್ಲಿ ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ರೂ. 1.00 ಲಕ್ಷಗಳ ವರೆಗೆ ದಂಡವನ್ನು ವಿಧಿಸಲು ಸಂಬಂದಿಸಿದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು. | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-04 |
| 02 | ಮರದ ಎಲೆಗಳನ್ನು ಪಡಿ ಮಾಡಲು ಹಾಗೂ ಸಣ್ಣ ಸಣ್ಣ ರೆಂಬೆಕೊಂಬೆಗಳನ್ನು ಕತ್ತರಿಸಲು ಹಾಲಿ ಇರುವ Shredders ಯಂತ್ರವನ್ನು ದುರಸ್ಥಿಗೊಳಿಸುವ ಬಗ್ಗೆ ಆರ್.ಡಬ್ಲ್ಯೂ.ಎ ರವರು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ತೊಟಗಾರಿಕೆ ಇಲಾಖೆಯ Horticulture inspector ರವರಿಗೆ ಸೂಚಿಸಿದರು. | ತೋಟಗಾರಿಕೆ ವಿಭಾಗ (ಶ್ರೀ.ಮಲ್ಯಾದ್ರಿ) |
| 03 | ವಾಲ್ಮಿಕಿ ಪಾರ್ಕ ಪಕ್ಕದಲ್ಲಿರುವ ಜಾಗದಲ್ಲಿ ಬಿ.ಬಿ.ಎಂ.ಪಿ ಮೂಲಭೂತ ಸೌಕಾರ್ಯ ವಿಭಾಗದಿಂದ ಪ್ಲೈ ಓವರ್ ಕಟ್ಟಡ ನಿರ್ಮಾಣ ಅವಧಿಯಲ್ಲಿ ಶೆಡ್‌ಗಳನ್ನು ನಿರ್ಮಿಸಿದ್ದು, ಈ ಜಾಗದಲ್ಲಿ ಪ್ಲಾಂಟೇಷನ್ ಹಾಳುಮಾಡಿರುವ ಬಗ್ಗೆ ಶ್ರೀಮತಿ ಪದ್ಮಾಪಾಟೀಲ್, ರವರು ತಿಳಿಸಿದರು | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ Road infrastructure BBMP ರವರಿಗೆ ಸೂಚಿಸಿದರು. | ಶ್ರೀ.ಹೆಚ್.ಕೆ.ದೇವರಾಜ್ ಸ.ಕಾ.ಅ Road infrastructure BBMP & ತೋಟಗಾರಿಕೆ ವಿಭಾಗ (ಶ್ರೀ.ಮಲ್ಯಾದ್ರಿ) |

| | | | |
|---|---|---|---|
| 04 | ವಾರ್ಡ್ ನಂ–04 ಕೆಂಪೇಗೌಡ ಪಾರ್ಕನಲ್ಲಿರುವ ಬೋರ್‌ವೆಲ್ ಅನ್ನು ದುರಸ್ಥಿಗೊಳಿಸುವ ಬಗ್ಗೆ. ಆರ್.ಡಬ್ಲ್ಯೂ.ಎ ಬಿ. ಸೇಕ್ಟರ್ ರವರು ಸಭೆಯಲ್ಲಿ ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಬೋರ್‌ವೆಲ್ ದುರಸ್ಥಿಗೊಳಿಸಲು ತೊಟಗಾರಿಕೆ ಇಲಾಖೆಯ Horticulture inspector ರವರಿಗೆ ಸೂಚಿಸಿದರು. | ತೋಟಗಾರಿಕೆ ವಿಭಾಗ (ಶ್ರೀ.ಮಲ್ಯಾದ್ರಿ) |
| 05 | ವಾರ್ಡ್ ನಂ–04ರ 16ನೇ ಬಿ ಅಡ್ಡರಸ್ತೆ 10ನೇ ಬಿ ಮುಖ್ಯರಸ್ತೆ ಮನೆ ನಂ 1945 ಕಟ್ಟಡದ ಮೇಲೆ ಅನಧೀಕೃತವಾಗಿ ಟವರ್ ಆಳವಡಿಸಿರುವುದನ್ನು ತೆರವುಗೊಳಿಸಲು ಸ್ಥಳೀಯ ನಿವಾಸಿಗಳು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ವಾರ್ಡ್ ನಂ–04ರ ಸಹಾಯಕ ಅಭಿಯಂತರವರಿಗೆ ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ ಕಾಯ್ದೆಯಂತೆ ನೋಟಿಸ್ ಜಾರಿ ಮಾಡಲು ಸೂಚಿಸಿದರು. | ಸಹಾಯಕ ಅಭಿಯಂತರರು (ವಾರ್ಡ್ –4) |
| 06 | 8ನೇ ಬಿ ಮುಖ್ಯರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆ ದುರಸ್ಥಿಗೊಳಿಸುವ ಬಗ್ಗೆ ಸ್ಥಳೀಯ ನಿವಾಸಿಗಳು ಕೋರಿದರು | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು. | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಶ್ರೀ.ವಿನಾಯಕ್ ಕೆ.ಎಂ |
| 07 | ಶಾರದನಗರದಲ್ಲಿ ಬೊರ್‌ವೆಲ್‌ಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿರುವುದಿಲ್ಲ ಎಂದು ಶ್ರೀ.ಬೋರೆಗೌಡ ಆರ್.ಡಬ್ಲೂ.ಎ ರವರು ಅಕ್ಷೇಪಣೆ ವ್ಯಕ್ತಪಡಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಹಾಗೂ ಬೇಸ್ಕಾಂ ಅಧಿಕಾರಿಗಳ ಜೋತೆ ಜಂಟಿ ತಪಾಸಣೆ ಮಾಡಿ ಬೋರ್‌ವೆಲ್‌ಗಳ ಸ್ಥಳದ ವಿವರ, ಕಾರ್ಯ ನಿರ್ವಹಿಸುತ್ತಿರುವ ಮತ್ತು ನಿಂತು ಹೋಗಿರುವ ಬೊರ್‌ವೆಲ್‌ಗಳ ಬಗ್ಗೆ ಹಾಗೂ ಆರ್.ಆರ್.ಸಂಖ್ಯೆಗಳನ್ನು ದೃಡಪಡಿಸಿಕೊಂಡು ಸಂಪೂರ್ಣ ವರದಿ ಸಲ್ಲಿಸಲು ಸೂಚಿಸಿದರು. | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಶ್ರೀ.ವಿನಾಯಕ್ ಕೆ.ಎಂ ಮತ್ತು ಸಹಾಯಕ ಅಭಿಯಂತರರು (ಬೇಸ್ಕಾಂ) ಶ್ರೀ.ಆನಂದ್ ಎ |

| | | | |
|---|---|---|---|
| 08 | ಕೆ.ಹೆಚ್.ಬಿ ಹೈ ರೈಸ್ ಬಿಲ್ಡಿಂಗ್ ಎ ಸೆಕ್ಟರ್ 6ನೇ ಎ ಮುಖ್ಯರಸ್ತೆಯಲ್ಲಿರುವ ಚರಂಡಿಯ ಮದ್ಯಭಾಗದಲ್ಲಿ ಬೇಸ್ಕಾಂ ವಿದ್ಯುತ್ ಸಂಪರ್ಕ ಕಲ್ಪಿಸುವ ಬಾಕ್ಸ್‌ಅನ್ನು ಅಳವಡಿಸಿರುವುದನ್ನು ತೆರವುಗೊಳಿಸಲು ಆರ್.ಡಬ್ಲ್ಯೂ.ಎ ಜಿ. ರವಿ ರವರು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಬೇಸ್ಕಾಂ ಇಲಾಖೆ ಯ ಅಧಿಕಾರಿಗಳಿಗೆ ಸೂಚಿಸಿದರು. | ಸಹಾಯಕ ಅಭಿಯಂತರರು (ಬೇಸ್ಕಾಂ) ಶ್ರೀ.ಆನಂದ್ ಎ |
| 09 | ಸಾರ್ವಜನಿಕ ಶೌಚಾಲಯಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುತ್ತಿರುವುದಿಲ್ಲ ಎಂಬುದಾಗಿ ಆರ್.ಡಬ್ಲ್ಯೂ.ಎ ರವರು ಅಕ್ಷೇಪಣೆ ವ್ಯಕ್ತಪಡಿಸಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಪಾರ್ಕನ ಒಳಭಾಗದಲ್ಲಿರುವ ಸಾರ್ವಜನಿಕ ಶೌಚಾಲಯಗಳನ್ನು ನಿರ್ವಹಣೆ ಮಾಡಲು ಸೂಚಿಸಿದರು. ಮತ್ತು ಸಾರ್ವಜನಿಕ ಶೌಚಾಲಯಗಳನ್ನು ಹೊಸದಾಗಿ ನಿರ್ಮಾಣ ಮಾಡಲು ಸ್ಥಳ ಹಾಗೂ ನಿರ್ವಹಣೆ ಮಾಡುವುದಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು. | ಸ.ಕಾ.ಅ (ಎಸ್.ಡಬ್ಲ್ಯೂ.ಎಂ) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ–04 |
| 10 | ಚಿಕ್ಕಬೊಮ್ಮಸಂದ್ರ ವೃತ್ತದಲ್ಲಿರುವ ಬಸ್ ಶೆಲ್ಟರ್‌ಅನ್ನು ದುರಸ್ಥಿಗೊಳಿಸಲು ಹಾಗೂ ಹೊಸದಾಗಿ ಸಾರ್ವಜನಿಕ ಶೌಚಾಲಯವನ್ನು ನಿರ್ಮಾಣ ಮಾಡಿಕೊಡಲು ಆರ್.ಡಬ್ಲ್ಯೂ.ಎ ರವರು ಕೋರಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ನೋಡಲ್ ಅಧಿಕಾರಿಗಳು ಸಹಾಯಕ ಅಭಿಯಂತರರಿಗೆ ವಿವರಣೆ ಕೇಳಿದ್ದು, ಅದರಂತೆ ಸಹಾಯಕ ಅಭಿಯಂತರರು ಬಿ.ಬಿ.ಎಂ.ಪಿ ಯೋಜನೆ ವಿಭಾಗದ ವತಿಯಿಂದ ವೈಟ್ ಟ್ಯಾಪಿಂಗ್ ಕಾಮಗಾರಿ ಪ್ರಗತಿಯಲ್ಲಿರುವ ಬಗ್ಗೆ ವಿವರಣೆ ನೀಡಿದರು. | |

➢ ಹಸಿಕಸ ಮತ್ತು ಒಣಕಸವನ್ನು ಸಂಗ್ರಹಿಸುವುದಕ್ಕೆ ಎಸ್.ಡಬ್ಲ್ಯೂ.ಎಂ ವತಿಯಿಂದ 21 ಬ್ಲಾಕ್ ಗಳನ್ನು ಗುರುತಿಸಿದ್ದು, ಸದರಿ ಬ್ಲಾಕ್‌ಗಳಿಗೆ ಪ್ರತಿನಿದಿಗಳನ್ನು ನೇಮಿಸಿಕೊಂಡು ಹೆಸರುಗಳುಳ್ಳ ವಿವರಗಳನ್ನು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಲ್ಲಿಸುವಂತೆ ಸಭೆಯಲ್ಲಿ ಹಾಜರಿದ್ದ ಆರ್.ಡಬ್ಲ್ಯೂ.ಎ ರವರಿಗೆ ನೊಡೆಲ್ ಅಧಿಕಾರಿಗಳು ಸೂಚಿಸಿದರು.

➢ ಮನೆ ಮನೆಗಳಿಂದ ಹಸಿಕಸ ವನ್ನು ಸಂಗ್ರಹಿಸಲು ಹೆಚ್ಚುವರಿಯಾಗಿ 5 ಸಂಖ್ಯೆ ಆಟೋಗಳು ಹಾಗೂ ಒಣಕಸ ಸಂಗ್ರಹಿಸಲು ಹೆಚ್ಚುವರಿಯಾಗಿ 2 ಸಂಖ್ಯೆ ಆಟೋಗಳನ್ನು ಪಡೆದುಕೊಳ್ಳಲು ವಾರ್ಡ್ ಕಮಿಟಿ

ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಂಬಂಧಪಟ್ಟವರಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸಂಬಂದಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂ.ಎಂ ರವರಿಗೆ ಮಾನ್ಯ ನೋಡೆಲ್ ಅಧಿಕಾರಿಗಳು ಸೂಚಿಸಿದರು.

- ಯಲಹಂಕ ಉಪನಗರ ಉಪ ವಿಭಾಗದ ಬಿ.ಬಿ.ಎಂ.ಪಿ ವಾರ್ಡ್ ಕಛೇರಿಯಲ್ಲಿ ದಿನನಿತ್ಯ ಸಾರ್ವಜನಿಕರಿಂದ ಬರುವ ದೂರುಗಳನ್ನು ಸ್ವೀಕರಿಸಲು ದೂರವಾಣಿ ವ್ಯವಸ್ಥೆಯನ್ನು ಕಲ್ಪಿಸಿ ದೂರವಾಣಿ ಸಂಖ್ಯೆಯನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಕಚೇರಿ ಮುಂಭಾಗದ ನಾಮಫಲಕದಲ್ಲಿ ಪ್ರದರ್ಶಿಸಿ ಹಾಗೂ ಸಾರ್ವಜನಿಕರ ದೂರುಗಳ ಬಗ್ಗೆ ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಮೂದಿಸುವಂತೆ ಸಂಬಂದಿಸಿದ ಸಹಾಯಕ ಅಭಿಯಂತರರು ವಾರ್ಡ್ ನಂ–04 ರವರಿಗೆ ಸೂಚಿಸಿದರು.

- ಯಲಹಂಕ ಉಪನಗರ 3ನೇ ಎ ಅಡ್ಡರಸ್ತೆ ಎ ಸೆಕ್ಟರ್ ಶೇಷಾದ್ರಿಪುರಂ ಕಾಲೇಜ್ ಹತ್ತಿರ ಹಾಗೂ ಮದರ್ ಡೈರಿ ವೃತ್ತದಲ್ಲಿ ಹಾಗೂ ಇನ್ನಿತರೆ ಸ್ಥಳಗಳಲ್ಲಿ ಪೇ ಅಂಡ್ ಯೂಸ್ ಮುಖಾಂತರ ಶುಲ್ಕ ವಿಧಿಸಲು ದ್ವಿ ಚಕ್ರ ವಾಹನಗಳು ಹಾಗೂ ನಾಲ್ಕು ಚಕ್ರದ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಸಂಬಂದಿಸಿದ ಟ್ರಾಫಿಕ್ ಠಾಣಾಧಿಕಾರಿಗಳನ್ನು ಸಂಪರ್ಕಿಸಿ ಈ ವಿಷಯದ ಬಗ್ಗೆ ಚರ್ಚಿಸಿ ಪ್ರಸ್ತಾವನೆಯನ್ನು ಟಿ.ಇ.ಸಿ. ಸೆಲ್ ಬಿ.ಬಿ.ಎಂ.ಪಿ ರವರ ಅನುಮೋದನೆಗೆ ಸಲ್ಲಿಸುವಂತೆ ನೋಡೆಲ್ ಅಧಿಕಾರಿಗಳು ಸಂಬಂದಿಸಿದ ಸಹಾಯಕ ಅಭಿಯಂತರರು ವಾರ್ಡ್ ನಂ–04 ರವರಿಗೆ ಸೂಚಿಸಿದರು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Ramasanjeevaiah

ಶ್ರೀ.ರಾಮಸಂಜೀವಯ್ಯ
ಸಹಾಯಕ ಅಭಿಯಂತರರು ಹಾಗೂ
ಕಾರ್ಯದರ್ಶಿಗಳು, ವಾರ್ಡ್ ನಂ–04

ಶ್ರೀ.ಮನೋಜ್‌ಜೈನ್, ಐ.ಎ.ಎಸ್.
ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ–04

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ (ವಿದ್ಯುತ್) ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಯಲಹಂಕ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೇಸ್ಕಾಂ/ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಲಹಂಕ ಉಪ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಕಡತಕ್ಕೆ.